ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ನಬಾರ್ಡ್ ಕಾಮಗಾರಿಗಳ ಗುಣಮಟ್ಟವನ್ನು ಇಲಾಖೆಯ ಗುಣನಿಯಂತ್ರಣ ಅಧಿಕಾರಿಗಳು ತಪಾಸಣೆ ನಡೆಸುತ್ತಿರುವರು, ಇದಲ್ಲದೆ ನಬಾರ್ಡ್ ಅಧಿಕಾರಿಗಳು, ಇಲಾಖೆಯ ಹಿರಿಯ ಅಧಿಕಾರಿಗಳು ಮತ್ತು ಮುಖ್ಯಮಂತ್ರಿಯವರ ವಿಶೇಷ ಜಾಗೃತ ದಳದ ಅಧಿಕಾರಿಗಳು ಕಾಮಗಾರಿಗಳ ಗುಣಮಟ್ಟವನ್ನು ಪರಿವೀಕ್ಷಿಸುತ್ತಿರುವರು. ಈವರೆಗೆ ಒಂದು ಕಳಪೆ ಕಾಮಗಾರಿಯನ್ನು ಗುರುತಿಸಿದ್ದು ಕ್ರಮ ಕೈಗೊಳ್ಳಬೇಕಿರುತ್ತದೆ.

ಆ) ರಸ್ತೆ ಕಾಮಗಾರಿಗಳಲ್ಲಿ ಡಾಂಬರೀಕರಣವನ್ನು ಹೆಚ್.ಎಂ.ಪಿ. ಮತ್ತು ಪೇವರ್‌ನಿಂದ ನಿರ್ವಹಿಸಲು ಒತ್ತಾಯಿಸಲಾಗುತ್ತಿದೆ. ಕಾಮಗಾರಿಗಳ ಪ್ರಗತಿ ಕುಂಠಿತವಾಗಿರುವಲ್ಲಿ ಗುತ್ತಿಗೆದಾರರಿಗೆ ದಂಡ ವಿಧಿಸಲಾಗುತ್ತಿದೆ ಹಾಗೂ ಕಾಮಗಾರಿ ವಿಳಂಬವಾದಲ್ಲಿ ಗುತ್ತಿಗೆಯನ್ನು ರದ್ದುಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಅರಣ್ಯ ಅಧಿಕಾರಿಗಳು ಕೃಷಿಕರ ಪಂಪ್ ಸೆಟ್‌ಗಳನ್ನು ತೆಗೆಯುತ್ತಿರುವುದು

1070 (1055) ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ಕೆಲವು ಗ್ರಾಮಾಂತರ ಪ್ರದೇಶಗಳಲ್ಲಿನ ರೈತರುಗಳು ಕೃಷಿ ಪಂಪ್‌ಸೆಟ್‌ಗಳನ್ನು ಅರಣ್ಯ ಇಲಾಖಾಧಿಕಾರಿಗಳು ತೆಗೆಸಲು ಪ್ರಯತ್ನಿಸುತ್ತಿರುವ ಬಗ್ಗೆ ರಾಜ್ಯ ಸರ್ಕಾರದವರಿಗೆ ದೂರುಗಳು ಬಂದಿವೆಯೆ? ಬಂದಿದ್ದಲ್ಲಿ ಯಾವ ನಿಯಮದಡಿಯಲ್ಲಿ ಈ ಕ್ರಮ ಜರುಗಿಸಲು ಅಧಿಕಾರಿಗಳು ಮುಂದಾಗಿದ್ದಾರೆ.

ಆ) ಕೃಷಿ ಪಂಪ್‌ಸೆಟ್‌ಗಳನ್ನು ಅಳವಡಿಸಿಕೊಂಡಿರುವ ರೈತರುಗಳಿಂದ ಯಾವ ರೀತಿಯ ಅನಾನುಕೂಲಗಳು ಇಲಾಖೆಯವರಿಗೆ ಉಂಟಾಗಿದೆ? ಇಂತಹ ಕ್ರಮಗಳನ್ನು ಕೈಬಿಟ್ಟು ರೈತರಿಗೆ ಅನುಕೂಲ ಮಾಡಿಕೊಡಲು ಸರ್ಕಾರ ಮಂದಾಗುವುದೇ?

ಶ್ರೀ ಕೆ.ಎಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ಗ್ರಾಮಾಂತರ ಪ್ರದೇಶಗಳಲ್ಲಿನ ರೈತರ ಕೃಷಿ ಪಂಪ್‌ಸೆಟ್‌ಗಳನ್ನು ಅಕ್ರಮವಾಗಿ ತೆಗೆದಿರುವುದಿಲ್ಲ. ಆದರ 2 (ಎರಡು) ಪ್ರಕರಣಗಳಲ್ಲಿ ಸೋಮೇಶ್ವರ ಅಭಯಾರಣ್ಯದೊಳಗೆ ಅಕ್ರಮವಾಗಿ ಅಳವಡಿಸಿರುವ ಪಂಪ್‌ಸೆಟ್ ಇತ್ಯಾದಿಗಳನ್ನು ಕಾನೂನು ರೀತಿಯಲ್ಲಿ ತೆಗೆಸಲಾಗಿದೆ. ವಿವರ ಈ ರೀತಿ ಇದೆ :

1. ಕಾರ್ಕಳ ವನ್ಯಜೀವಿ ವಲಯದ ಸೋಮೇಶ್ವರ ಅಭಯಾರಣ್ಯದ ಜಟ್‌ಕಟ್‌ಮೇಲೆ ಸುರಕ್ಷಿತಾರಣ್ಯದಲ್ಲಿ ಅಕ್ರಮವಾಗಿ ಶ್ರೀಮತಿ ಪಾರ್ವತಿಶೇಡ್ತಿ, ಈ ಭಾಕ್ಕರಶೆಟ್ಟಿರವರ ಹೆಂಡತಿ, ಕುಚ್ಚೂರು ಗ್ರಾಮ ಕಾರ್ಕಳ ತಾಲ್ಲೂಕು ಇವರು ಪಂಪ್‌ಸೆಟ್ ಹಾಗೂ ಪಿವಿಸಿ ಪೈಪ್‌ಲೈನು ಮತ್ತು ವಿದ್ಯುತ್ ಸಲಕರಣೆಗಳನ್ನು ಅಳವಡಿಸಿದ್ದು ಕರ್ನಾಟಕ ಅರಣ್ಯ ಕಾಯ್ದೆ 1963 ಕಲಂ 24 ಎ.ಸಿ.ಸಿ(2) ಡಿಜಿ ಜಿಜಿ ಮತ್ತು ಕಲಂ 41, ವನ್ಯಜೀವಿ ಸಂರಕ್ಷಣಾ ಕಾಯ್ದೆ

1972 ಕಲಂ 27, 29, 31, 32, 50 ಮತ್ತು ಕಲಂ 51ರ ಹಾಗೂ ಅರಣ್ಯ ಸಂರಕ್ಷಣಾ ಕಾಯ್ದೆ, ಕಲಂ 2ರನ್ವಯ ಅರಣ್ಯ ತಕ್ಷೀರು ಸಂಖ್ಯೆ 24; 2000-01 ರಂತೆ ಕಾರ್ಕಳ ವನ್ಯಜೀವಿ ವಲಯ ಅರಣ್ಯಾಧಿಕಾರಿ ಇವರು ದಾಖಲು ಮಾಡಿರುತ್ತಾರೆ. ಶ್ರೀಮತಿ ಪಾರ್ವತಿ ಕೇಡ್ತಿ ಇವರು ಅರಣ್ಯ ಇಲಾಖೆಯ ಕಾನೂನು ಕ್ರಮ ಕೈಗೊಳ್ಳುವುದನ್ನು ತಡೆ ಹಿಡಿಯಲು ಕಾರ್ಕಳ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು ಅದರ ಅರ್ಜಿಯು ತಿರಸ್ಕೃತವಾಗಿರುತ್ತದೆ. ತದನಂತರವೇ ಅಕ್ರಮವಾಗಿ ಅಳವಡಿಸಿದ ಪಂಪ್‌ಸೆಟ್ ಇತ್ಯಾದಿಗಳನ್ನು ತೆಗೆದು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ. ಸದರಿಯವರ ಅರ್ಜಿಯು ನ್ಯಾಯಾಲಯದ ಒಎಸ್.ನಂ.8:2000ರ ಪ್ರಕಾರ ''ರಿಜೆಕ್ಟ್‌ಡ್ ವಿತ್ ಕಾಸ್ಟ್'' ಎಂಬುದಾಗಿಯೂ ಈ ಪ್ರಕರಣದಲ್ಲಿ ಇಲಾಖೆ ಕೈಗೊಂಡ ಕ್ರಮವು ಕಾನೂನು ಪ್ರಕಾರವಾಗಿರುವುದಾಗಿಯೂ ತೀರ್ಮಾನಿಸಲ್ಪಟ್ಟಿರುತ್ತದೆ.

2. ಇದಲ್ಲದೆ ಸೋಮೇಶ್ವರ ಅಭಯಾರಣ್ಯದ ಮತ್‌ಕಲ್ ಗುಡ್ಡೆ ಸುರಕ್ಷಿತಾರಣ್ಯದಲ್ಲಿ ಶ್ರೀಮತಿ ಪ್ರೇಮ ಶೇಖರ್, ಶ್ರೀ ಶೇಖರ್ ಮಡಿವಾಳರ ಪತ್ನಿ ಕುಚೂಉರು ಗ್ರಾಮ ಕಾರ್ಕಳ ತಾಲ್ಲೂಕು ಇವರು ಅಕ್ರಮವಾಗಿ ವಿದ್ಯುತ್ ಪಂಪ್‌ಸೆಟ್ ಹಾಗೂ ಪಿವಿಸಿ ಪೈಪ್ ಲೈನ್‌ಗಳನ್ನು ಅಳವಡಿಸಿದ್ದು ಕರ್ನಾಟಕ ಅರಣ್ಯ ಕಾಯ್ದೆ 1963 ಕಲಂ 24ಎ, ಸಿಸಿ(2) ಡಿ.ಜಿ. ಜಿಜಿ ಮತ್ತು ಕಲಂ 27, 29, 31, 32, 50 ಮತ್ತು ಕಲಂ 51ರ ಹಾಗೂ ಅರಣ್ಯ ಸಂರಕ್ಷಣಾ ಕಾಯ್ದೆ ಕಲಂ 2ರ ಅನ್ವಯ ಅರಣ್ಯ ತಕ್ಷೀರು 22:2000-01 ರಂತೆ ಕಾರ್ಕಳ ವನ್ಯಜೀವಿ ವಲಯರಣ್ಯಾಧಿಕಾರಿಗಳು ದಾಖಲು ಮಾಡಿರುತ್ತಾರೆ. ಈ ಬಗ್ಗೆ ಸದರಿಯವರು ಕಾರ್ಕಳ ನ್ಯಾಯಾಲಯದಲ್ಲಿ ಓಎಸ್ ನಂ.5:2001ರ ಪ್ರಕಾರ ದಾವೆ ಹೂಡಿದ್ದು, ನಂತರ ಪ್ರಕರಣವನ್ನು ಒಪ್ಪಿಕೊಂಡು ದಾವೆಯನ್ನು ಹಿಂದಕ್ಕೆ ಪಡೆದಿರುತ್ತಾರೆ. ಅದರಂತೆಯೇ ಅಪಾದಿತರ ಮೇಲೆ ಇಲಾಖಾ ದಂಡನೆ ವಿಧಿಸಲಾಗಿದೆ.

ಆ) ಮೇಲಿನ ಪ್ರಕರಣವು ಅಭಯಾರಣ್ಯ: ಸುರಕ್ಷಿತಾರಣ್ಯದ ಒಳಗೆ ನಡೆದಿದ್ದು, ನಿಯಮಗಳ ಪ್ರಕಾರ ಕಾನೂನು ಬಾಹಿರವಾಗಿರುತ್ತದೆ. ಈ ಅಭಯಾರಣ್ಯ: ಸುರಕ್ಷಿತಾರಣ್ಯ ಪ್ರದೇಶಗಳನ್ನು ಯಾವುದೇ ಅರಣ್ಯೇತರ ಚಟುವಟಿಕೆಗಳಿಗೆ ಉಪಯೋಗಿಸುವುದನ್ನು ವನ್ಯಜೀವಿ ಸಂರಕ್ಷಣಾ ಕಾಯ್ದೆ 1972ರ ಪ್ರಕಾರ ನಿಷೇದಿಸಲ್ಪಟ್ಟಿರುತ್ತದೆ.

ಮೀನುಗಾರಿಕೆ ಇಲಾಖೆಯಲ್ಲಿ ಜಾರಿಗೊಳಿಸಲಾಗುತ್ತಿರುವ ಹೊಸ ಕಾರ್ಯಕ್ರಮಗಳು

1071 (1063) ಶ್ರೀ ಕೆ. ಜಯಪ್ರಕಾಶ್ ಹೆಗಡೆ (ಬ್ರಹ್ಮಾವರ) : ಮಾನ್ಯ ಮೀನುಗಾರಿಕೆ ಬಂದರು ಮತ್ತು ಪ್ರವೇಶಾಭಿವೃದ್ಧಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೀನುಗಾರಿಕೆ ಇಲಾಖೆಯವರು ಪ್ರಸಕ್ತ ಸಾಲಿನಲ್ಲಿ ಹಾಕಿಕೊಂಡ ಹೊಸ ಕಾರ್ಯಕ್ರಮ ಯಾವುವು ಅವುಗಳ ರೂಪುರೇಶೆಗಳೇನು ಅದಕ್ಕಾಗಿ ನಿಗದಿಪಡಿಸಲಾಗಿರುವ ಹಣದ ಮೊತ್ತ ಎಷ್ಟು?